ನೀನು ಎಲ್ಲರ ಮುಂದೆ ಎಷ್ಟು ಅಪಮಾನ ಮಾಡಿದೀಯ ಗೊತ್ತಾ' ಅಂತ ಅಮ್ಮ ಯಾವಾಗಲಾದರೂ ನೆನೆಸಿಕೊಂಡು ನಗುತ್ತಿದ್ದರು. ಶಿಶುವಿಹಾರದ ನಂತರ ಚಾವಡಿ ಸ್ಕೂಲು ಅಂದರೆ ಗೌರ್ಮೆಂಟ್ ಗರ್ಲ್ಸ್ ಸ್ಕೂಲ್ ಯಾನೆ 'ಆನೆ ಕರೋಟಿ' (ಅಂದರೆ ಆನೆಯ ಕರು ಹಟ್ಟಿ – ಆನೆ ಸಾಕುವ ಸ್ಥಳ ಎಂದು ಕೇಳಿದ್ದೆ) ಸ್ಕೂಲಿಗೆ ಹಾಕಿದರು. ಚಾವಡಿ ಸ್ಕೂಲಿನಲ್ಲಿ ತುಂಬಾ ಒಳ್ಳೆಯ ಗುರುಗಳು ಇದ್ದರು. ನಾನು ಏಳನೇ ತರಗತಿಯಲ್ಲಿದ್ದಾಗ ಸರಸ್ವತಿ ಮೇಡಂ (ತುಂಬಾ ಒಳ್ಳೆಯ ಕನ್ನಡ ಮೇಷ್ಟ್ರು) ಒಂದು ದಿನ ನಿಮ್ಮಲ್ಲಿ ಯಾರಾದರೂ ಅರ್ಥವತ್ತಾಗಿ ಕವಿತೆ ಬರೆದಿದ್ದರೆ ತೋರಿಸಿ, ಚೆನ್ನಾಗಿದ್ದರೆ ಬೋರ್ಡಿನ ಮೇಲೆ ಬರೆಸುತ್ತೇವೆ ಅಂತ ಹೇಳಿದರು.

ಅವರು ಹಾಗೆ ಹೇಳಿದ್ದೆ ತಡ ನಾವೆಲ್ಲರೂ ಕವಿತೆ ಬರೆಯಲಿಕ್ಕೆ ಶುರುಮಾಡಿದೆವು. ಅವರು ಹೇಳಿದ್ದು ಬೆಳಗಿನ ಹೊತ್ತು ಇರಬೇಕು, ಊಟಕ್ಕೆ ಕೂತಾಗ ಎಲ್ಲರೂ ಕವಿಗಳಾಗಿ ಬಿಟ್ಟಿದ್ದರು.

ಆಗ ಬರೆದ ಕವಿತೆಯನ್ನು ನಾನು ನನ್ನ ತಂದೆಗೆ ತೋರಿಸಿದೆ. ನಮ್ಮ ಮನೆಯ ಬಚ್ಚಲು ಸ್ವಚ್ಛ ಮಾಡಲಿಕ್ಕೆ ಬರುತ್ತಿದ್ದ ರಂಗಿ ಎಂಬ ಹೆಣ್ಣುಮಗಳ ಬಗ್ಗೆ ಕವಿತೆ ಬರೆದಿದ್ದೆ. ಅವಳ ನಿಜ ಹೆಸರು ನನಗೆ ತಿಳಿಯದು. ಆದರೆ, ಎಲ್ಲರೂ ಅವಳನ್ನ ರಂಗಿ ಎಂದೂ, ಅವಳ ಗಂಡನನ್ನು ರಂಗ ಎಂದು ಕರೆಯುತ್ತಿದ್ದರು.

ಬೀದಿಯ ಕಸಗುಡಿಸುವ ರಂಗಿಗೆ ಭೋಗ ಬೇಕೆಂಬ ಆಸೆ, ಅರಮನೆ ಬೇಕೆಂಬ ಆಸೆ, ರಾಣಿ ಪದವಿ ಬೇಕೆಂಬ ಆಸೆ. ಆದರೆ, ರಂಗಿಗೆ ಬೀದಿಯೇ ಅರಮನೆ, ಕಸಬರಿಗೆಯೇ ಭೋಗ, ಕಸ ಗುಡಿಸುವುದೇ ರಾಣಿ ಪದವಿ ಅಂತ ಹೀಗೆ ಏನೇನೋ ಬರೆದಿದ್ದೆ. ಬರೀ ಆರು ಸಾಲಿನ ಕವನ ಅದು. ಆದರೆ, ಬರೆಯುತ್ತೇನೆ ಎಂಬ ಸಂಗತಿ ತಂದೆಯವರಿಗೆ ತುಂಬಾ ಖುಷಿ ಕೊಟ್ಟಿತು. ಆಗಿನಿಂದ ವಿಶೇಷ ಕಾಳಜಿಯಿಂದ ಉತ್ತೇಜಿಸಲು ಶುರುಮಾಡಿದರು.

ಆ ವಯಸ್ಸಿಗೆ ನನಗೆ ಕವಿತೆಯ ಸ್ವರೂಪ ತಿಳಿದಿರಲು ಮುಖ್ಯ ಕಾರಣ ಆಕಾಶವಾಣಿ. ಅಷ್ಟಿಷ್ಟು ಕವನ ಬರೆದಾಗಲೆಲ್ಲ ಅಪ್ಪನ ಮುಂದೆ ಓದುತ್ತಿದ್ದೆ. ಅಪ್ಪ ಬಹಳ ಸಂಭ್ರಮದಿಂದ ಕೇಳಿಸಿಕೊಂಡು ನನ್ನ ಕೈಗೆ 10 ಪೈಸೆ ಕೊಡುತ್ತಿದ್ದರು. ಹೀಗೆ ಈ ರೀತಿ ಉತ್ತೇಜನಕ್ಕೆ ನನಗೆ ಮನೆಯಲ್ಲಿ ನಮ್ಮಪ್ಪ ಭೋಜರಾಜ ನಾನು ಕಾಳಿದಾಸ ಎನ್ನುವ ಕಲ್ಪನೆಯನ್ನು ಮಾಡಿಕೊಂಡು ತಮಾಷೆ ಮಾಡುತ್ತಾ ಇದ್ದರು. ಮುಂದೆ ನಾವು ದೊಡ್ಡವರಾದಂತೆ ನಮ್ಮ ತಂದೆ ಬೆಳಗ್ಗೆ ಜಮೀನಿಗೆ ಹೋಗಿ ಬಂದು ಮತ್ತೆ ಆಫೀಸಿಗೆ ತಯಾರಾಗಿ ಹೊರಡುತ್ತಿದ್ದರು. ಆ ಮಧ್ಯದಲ್ಲಿ ಗಡ್ಡ ಕೆರೆದುಕೊಳ್ಳಲು ಕುಳಿತುಕೊಂಡಾಗ ನಾನು ಹೋಗಿ ಅವರ ಮುಂದೆ ಬರೆದಿದ್ದನ್ನ ಓದಬೇಕಿತ್ತು. 'ಆಹಾ, ಏನು ಚೆನ್ನಾಗಿ ಬರೆದಿದ್ದಿಯಾ' ಅಂತ ಅವರು 5 ಪೈಸೆ 10 ಪೈಸೆ ಕೊಡುತ್ತಿದ್ದರು. ಆಮೇಲೆ ನಮ್ಮ ಮನೆಗೆ ನಮ್ಮ ದೊಡ್ಡಪ್ಪ ಬರುತ್ತಿದ್ದರು. ಅವರ ಮುಂದೆ ನನ್ನ ತಂದೆ ಬಹಳ ಹೆಮ್ಮೆಯಿಂದ, 'ಅಣ್ಣ ನನ್ನ ಮಗಳು ಬರೆದಿದ್ದಾಳೆ' ಎಂದು ಹೇಳಿಕೊಳ್ಳುತ್ತಿದ್ದರು. ಅಪ್ಪ ಕೊಟ್ಟ ಹಣದಲ್ಲಿ ಮುಂದೆ ಒಂದು ದಿನ ಎರಡು ರೂಪಾಯಿ ಕೊಟ್ಟು ಒಂದು ಪುಸ್ತಕ ತೆಗೆದುಕೊಂಡು ಅದರಲ್ಲಿ ಬರೆದದ್ದನ್ನೆಲ್ಲ ಒಂದು ಕಡೆ ಕ್ರೋಢೀಕರಿಸಲು ಪ್ರಾರಂಭ ಮಾಡಿದೆ. ಇದೆಲ್ಲ ಏಳನೇ ಕ್ಲಾಸಿನಲ್ಲೇ ಶುರುವಾಯಿತು. ಆಗಾಗ ತಂದೆ ಸೆಂಟ್ರಲ್ ಲೈಬ್ರರಿಗೆ ಹೋಗುತ್ತಿದ್ದರು. ಅಲ್ಲಿಂದ ಪುಸ್ತಕಗಳನ್ನು ಎರವಲು ತಂದು ಕೊಡುತ್ತಿದ್ದರು. ಎಲ್ಲಿಯಾದರೂ ಒಳ್ಳೆಯ ಭಾಷಣಗಳು ಏರ್ಪಟ್ಟರೆ ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು.

◆ **ನಿಮ್ಮ ತಂದೆಯವರಿಗೂ ಬರವಣಿಗೆಯಲ್ಲಿ ಆಸಕ್ತಿ ಇತ್ತಾ? ಅವರ ಹಿನ್ನೆಲೆ ಸ್ವಲ್ಪ ಹೇಳಿ.**

ನನ್ನ ತಂದೆ ಸಿ. ಶಿವಣ್ಣ ಬಿ.ಎ. ಆನರ್ಸ್ ಮಾಡಿದ್ದರು, ಅವರಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸ. ನಂಜನಗೂಡಿನ ಹತ್ತಿರದ ಕೂಡನಹಳ್ಳಿ ಅವರ ಊರು. ಈಗಿನವರು ಸಿನಿಮಾದಲ್ಲಿ ಹೇಗೆ